ಓದುವುದನ್ನು ನಾನು ನಿರೀಕ್ಷಿಸಿರಲಿಲ್ಲ. ಆದ್ದರಿಂದ ಅಧ್ಯಕ್ಷರೆ, ನೀವು ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ. ಅಲ್ಲೇನು ಖಾಲಿಯಿರುವ ಹುದ್ದೆಗಳ ಬಗ್ಗೆ ಅಧಿಕಾರಿಗಳಿಂದಲೇ ತರಿಸಿಕೊಂಡಿರುವ statement ನಮ್ಮ ಹತ್ತಿರ ಇದೆ. ಅದನ್ನು ನಾನು ತಮಗೆ ತೋರಿಸುತ್ತೇನೆ. ಖಾಲಿ ಇರತಕ್ಕಂಥ ಹುದ್ದೆಗಳನ್ನು contract basis ಮೇಲೆ ತುಂಬತಕ್ಕಂಥದ್ದಕ್ಕೆ ಆದಷ್ಟು ಜಾಗ್ರತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಡುತ್ತಾರೆಂದು ನಾವು ನಿರೀಕ್ಷೆ ಮಾಡುತ್ತೇವೆ. ಇವರು ಉತ್ತರದಲ್ಲಿ ತೊಂದರೆಯಾಗಿಲ್ಲವೆಂದು ಹೇಳುತ್ತಿದ್ದಾರೆ. ಈ ರೀತಿಯ ಉತ್ತರ ಕೇಳುವುದಕ್ಕೆ ನಾವು ಇಲ್ಲಿ ಬಂದು ಕುಳಿತಿಲ್ಲ. ನಾವು ತೊಂದರೆಯಾಗಿದೆ ಎಂದು ಹೇಳಿದ್ದೇವೆ. ಆದ್ದರಿಂದ ತಾವು ನಮ್ಮ ರಕ್ಷಣೆಗೆ ಬಂದು ಆ ಹುದ್ದೆಗಳನ್ನು contract basis ಮೇಲೆ ತುಂಬುತ್ತೇವೆಂದು ಹೇಳುವ ರೀತಿಯಲ್ಲಿ ಉತ್ತರ ಕೊಡುವಂತೆ ತಾವು ಅವರಿಗೆ ಸೂಚನೆ ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇನೆ.

(ಗೊಂದಲ)

ಶ್ರೀ ಕೆ.ಎನ್.ರಾಜಣ್ಣ : ದತ್ತ ನೀವು ಆಮೇಲೆ ಮಾತನಾಡಿ, ಸಚಿವರು ಉತ್ತರ ಹೇಳಲಿ.

ಅಧ್ಯಕ್ಷರು : ಮಧ್ಯದಲ್ಲಿ ಮಾತನಾಡಬೇಡಿ, ಇದು bad precedent ಆಗುತ್ತದೆ ಪ್ಲೀಸ್.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಸದಸ್ಯರ ಆಕ್ರೋಶ ಏನೆಂಬುದು ನಮಗೆ ಅರ್ಥವಾಗುತ್ತದೆ. ವಸ್ತುಸ್ಥಿತಿ ಏನಿದೆ ಎನ್ನುವುದನ್ನು ಸರ್ಕಾರದ ಉತ್ತರದ ರೂಪದಲ್ಲಿಯೇ ಕೊಡಬೇಕಾಗುತ್ತದೆ. ಅದು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದಾಗ ಇದೇ ರೀತಿಯಲ್ಲಿ ಉತ್ತರ ಕೊಡತಕ್ಕಂತಹ ಸಂಪ್ರದಾಯವಿದೆ. ಅದೇ ಪ್ರಕಾರ ಉತ್ತರ ಕೊಡಬೇಕಾಗುತ್ತದೆ. ಆದರೆ ವಾಸ್ತವಿಕವಾಗಿ ಅಲ್ಲಿ ಏನು ಹುದ್ದೆಗಳು ಕೊರತೆ ಇದೆ ಅವರನ್ನು contract basis ಮೇಲೆ appoint ಮಾಡುವುದಕ್ಕೆ ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳುತ್ತದೆ.

ಅಧ್ಯಕ್ಷರು : ಆಯಿತು. ಶ್ರೀ ಅಂಗಾರರವರು ಮಾತನಾಡಿ.

(3). ವಿಷಯ: ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನಲ್ಲಿ ವಾಣಿಜ್ಯ ವಿಭಾಗದ ಕಾಲೇಜಿಗೆ 225 ವಿದ್ಯಾರ್ಥಿಗಳನ್ನು ಸೇರಿಸಲು ವ್ಯವಸ್ಥೆ ಮಾಡುವ ಬಗ್ಗೆ.

ಶ್ರೀ ಎಸ್.ಅಂಗಾರ(ಸುಳ್ಯ) : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕು ಕೇಂದ್ರದಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜುಗಳಿವೆ. ಆ ಕಾಲೇಜುಗಳಲ್ಲಿ ಸುಮಾರು 60 ವರ್ಷಗಳಿಂದ ವಾಣಿಜ್ಯ ವಿಭಾಗ ಇದೆ. ಆದರೆ 2009–10ಕ್ಕೆ ಹೆಚ್ಚುವರಿಯಾಗಿ ಒಂದು ವಾಣಿಜ್ಯ ವಿಭಾಗ ದೇವನಹಳ್ಳಿ ಹೋಬಳಿ ಗ್ರಾಮದಿಂದ ಶಿಫ್ಟ್ ಆಗಿ ಸುಳ್ಯಕ್ಕೆ ಮಂಜೂರಾಗಿರುತ್ತದೆ. 2010–11 ಕ್ಕೆ ಸುಮಾರು 164 ಮಕ್ಕಳು admission ಆಗಿದ್ದಾರೆ. ಅದೇ ರೀತಿಯಲ್ಲಿ 2011–12ಕ್ಕೆ 200 ವಿದ್ಯಾರ್ಥಿಗಳು ಸೇರ್ಪಡೆಯಾಗಿದ್ದಾರೆ. ಈ ವರ್ಷದಲ್ಲಿ ಸುಮಾರು 225 ವಿದ್ಯಾರ್ಥಿಗಳು ಸೇರ್ಪಡೆಗೆ ಅರ್ಜಿಯನ್ನು ಹಾಕಿದ್ದಾರೆ. ಆದರೆ ಈ ನಡುವೆ ಸರ್ಕಾರದ ಕಡೆಯಿಂದ ಆ ವಾಣಿಜ್ಯ ವಿಭಾಗವನ್ನು ಸುಳ್ಯ ನಗರದ ಗಾಂಧಿನಗರ ಜೂನಿಯರ್ ಕಾಲೇಜಿಗೆ ವರ್ಗಾವಣೆ ಮಾಡಿದ್ದಾರೆ. ಇದರಿಂದಾಗಿ ಆ ಜೂನಿಯರ್ ಕಾಲೇಜಿನಲ್ಲಿ ಗೊಂದಲ ಪ್ರಾರಂಭವಾಗಿ ಗಲಾಟೆಗಳು ಶುರುವಾಗಿದೆ. ಸುಮಾರು 225 ವಿದ್ಯಾರ್ಥಿಗಳಿಗೆ ಯಾವ ಶಾಲೆಗೆ ಸೇರಿಸಬೇಕೆಂದು ಗೊಂದಲವಾಗಿದೆ.ಆದ್ದರಿಂದ ತಕ್ಷಣ ಆ ಒಂದು ವರ್ಗಾವಣೆ ಮಾಡಿರುವವಂಥ ವಾಣಿಜ್ಯ ವಿಭಾಗದ ಹುದ್ದೆಗಳನ್ನು ಹಿಂದೆ ಕಾರ್ಯ ನಿರ್ವಹಿಸುತ್ತಿದ್ದ ಸುಳ್ಯ ಜೂನಿಯರ್ ಕಾಲೇಜಿಗೆ ಬದಲಾವಣೆ ಮಾಡಬೇಕೆಂದು ತಮ್ಮ ಮೂಲಕ ಸಂಬಂಧಪಟ್ಟ ಸಚಿವರಲ್ಲಿ ಕೇಳಬಯಸುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ : ಅಂಗಾರರವರು ಇವತ್ತು ಶೂನ್ಯವೇಳೆಯಲ್ಲಿ ಎತ್ತಿರುವಂಥ ವಿಚಾರವನ್ನು ಮಾನ್ಯ ಪ್ರಾಥಮಿಕ ಶಿಕ್ಷಣ ಸಚಿವರ ಗಮನಕ್ಕೆ ತಂದು ಉತ್ತರವನ್ನು ಸೋಮವಾರ ಕೊಡಿಸುತ್ತೇವೆ.

ಶ್ರೀ ಎಸ್.ಅಂಗಾರ : ತಕ್ಷಣ ಆ 225 ವಿದ್ಯಾರ್ಥಿಗಳಿಗೆ ಸೇರ್ಪಡೆ ಮಾಡಿಕೊಳ್ಳಲು ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ತಕ್ಷಣ ಅದಕ್ಕೆ ವ್ಯವಸ್ಥೆ ಮಾಡಿ ಎಂದು ತಿಳಿಸಬೇಕು.

ಶ್ರೀ ಟಿ.ಬಿ.ಜಯಚಂದ್ರ : ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿ ಅದಕ್ಕೆ ಸಮರ್ಪಕವಾಗಿ ಉತ್ತರವನ್ನು ಕೊಡಿಸುತ್ತೇನೆ.

ಅಧ್ಯಕ್ಷರು : ಶ್ರೀ ಎನ್.ಹೆಚ್.ಶಿವಶಂಕರರೆಡ್ಡಿ

ಮಾನ್ಯ ಸದಸ್ಯರಿಂದ ಭಾಷಣವು ಪರಿಷ್ಕರಿಸಲ್ಪಟ್ಟಿದೆ.

ಶ್ರೀ ಎಂ.ಹೆಚ್.ಶಿವಶಂಕರರೆಡ್ಡಿ : ಮಾನ್ಯ ಸಭಾಧ್ಯಕ್ಷರೆ, ನಮ್ಮ ಆರು ಬರಡು ಜಿಲ್ಲೆಗಳ ಕುಡಿಯುವ ನೀರಿನ ಬವಣೆ ನೀಗಿಸಲು ಒಂದು ಶಾಶ್ವತವಾದ

ಪರಿಹಾರವನ್ನು ಹುಡುಕಬೇಕೆಂದು ಹೇಳಿ ಹಿಂದಿನ ಸರ್ಕಾರಗಳು ಸಹ ಅನೇಕ ಪ್ರಯತ್ನಗಳನ್ನು ಮಾಡಿ ಬಜೆಟ್‌ನಲ್ಲಿ ನಮ್ಮ ರಾಜ್ಯಪಾಲರ ವರದಿಯಲ್ಲಿಯೂ ಕೂಡ mention ಮಾಡಿ ಎತ್ತಿನಹೊಳೆ ಯೋಜನೆ ಮತ್ತು ಪರಮಶಿವಯ್ಯನವರ ವರದಿಯ ಅನುಷ್ಠಾನದ ಬಗ್ಗೆ ಅದನ್ನು ವಿಶೇಷವಾಗಿ ಈ ಸದನದಲ್ಲಿ ಚರ್ಚೆ ಮಾಡುವ ಬಗ್ಗೆ ಒಂದೆರಡು ದಿವಸ ಅಧಿವೇಶನವನ್ನು ಮೀಸಲಿಡಬೇಕೆಂದು ಹೇಳುತ್ತಿದ್ದೇನೆ.

ಅಧ್ಯಕ್ಷರು : ನೀವು ಯಾವ ವಿಚಾರದ ಬಗ್ಗೆ ಕೇಳುತ್ತಿದ್ದೀರಿ?

ಶ್ರೀ ಎನ್.ಹೆಚ್.ಶಿವಶಂಕರರೆಡ್ಡಿ : ಎರಡು ವಿಷಯಗಳ ಬಗ್ಗೆ ಕೊಟ್ಟಿದ್ದೇನೆ.

ಅಧ್ಯಕ್ಷರು : ಇಲ್ಲಿ ಬಂದಿರುವುದು ಗೌರಿಬಿದನೂರಿನ ತಾಲ್ಲೂಕಿನ ಅನಧಿಕೃತ ಮಧ್ಯದಂಗಡಿ ಬಗ್ಗೆ. ಎರಡರಲ್ಲಿ ಒಂದರ ಬಗ್ಗೆ ಪ್ರಸ್ತಾಪ ಮಾಡಿ.

ಶ್ರೀ ಎಂ.ಹೆಚ್.ಶಿವಶಂಕರರೆಡ್ಡಿ : ಆಯಿತು.

(4) ವಿಷಯ : ಗೌರಿಬಿದನೂರು ತಾಲ್ಲೂಕಿನಲ್ಲಿ ಅನಧಿಕೃತ ಮಧ್ಯದಂಗಡಿಗಳ ಹಾವಳಿ ಬಗ್ಗೆ.

ಶ್ರೀ ಎಂ.ಹೆಚ್.ಶಿವಶಂಕರರೆಡ್ಡಿ : (ಗೌರಿಬಿದನೂರು): ಮಾನ್ಯ ಅಧ್ಯಕ್ಷರೆ, ನಮ್ಮ ತಾಲ್ಲೂಕಿನ ಪ್ರತಿಯೊಂದು ಹಳ್ಳಿಯಲ್ಲೂ ಕೂಡ ಸರ್ವೆ ಸಾಮಾನ್ಯವಾಗಿ ಅನಧಿಕೃತವಾದ ಮಧ್ಯದಂಗಡಿಗಳಿವೆ. ಸ್ಥಳೀಯ Exercise Department ಮತ್ತು ಪೊಲೀಸ್ ಇಲಾಖೆಗಳಿಗೆ ಬಹಳಷ್ಟು ಬಾರಿ ಹೇಳಿದ್ದರೂ ಕೂಡ ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ಲೈಸೆನ್ಸ್ ಅಂಗಡಿಗಳಿಗೂ ಅನಧಿಕೃತ ಅಂಗಡಿಗಳಿಗೂ ಏನು ವ್ಯತ್ಯಾಸವೇ ಇಲ್ಲ. ಸರ್ವೆಸಾಮಾನ್ಯವಾಗಿ ಎಲ್ಲಾ ಹಳ್ಳಿಯಲ್ಲೂ ಇವೆ. ಪ್ರತಿ ಹಳ್ಳಿಯಲ್ಲೂ ಕೂಡ ವಾತಾವರಣವನ್ನು ಕೆಡಿಸಿದ್ದಾರೆ. ಇಲಾಖೆಯಿಂದ ಕಟ್ಟುನಿಟ್ಟಾಗಿ ಇದಕ್ಕೆ ಕಡಿವಾಣ ಹಾಕುವ ಕೆಲಸವಾಗಬೇಕೆಂಬುದು ನನ್ನ ಮನವಿ.

ಶ್ರೀ ಸತೀಶ್ ಜಾರಕಿಹೊಳಿ(ಅಬಕಾರಿ ಸಚಿವರು): ಮಾನ್ಯ ಅಧ್ಯಕ್ಷರೆ, ಗೌರಿಬಿದನೂರು ತಾಲ್ಲೂಕಿನ ಕೆಲವು ಹಳ್ಳಿಯಲ್ಲಿ ಅನಧಿಕೃತ ಸ್ಥಳಗಳಲ್ಲಿ ಮದ್ಯ ಮಾರಾಟದ ಬಗ್ಗೆ ಸಾರ್ವಜನಿಕರಿಂದ ದೂರುಗಳು ಸ್ವೀಕೃತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಇಂತಹ ಅಕ್ರಮ ಮಾರಾಟವನ್ನು ತಡೆಗಟ್ಟುವಲ್ಲಿ ಕಾನೂನಿನ ರೀತ್ಯಾ ಕ್ರಮ ಜರುಗಿಸಲಾಗುತ್ತಿದೆ. ರಾಜ್ಯದಾದ್ಯಂತ ಕಳೆದ ಮೂರು